ಒಟ್ಟು 55 ಹೆಕ್ಟೇರ್ ಅರಣ್ಯ ಮೀಸಲು ಎಂದು ಘೋಷಿತ ಪ್ರದೇಶದ ಪೈಕಿ 10 ಹೆಕ್ಟೇರ್ ಜಮೀನು ಕೈಬಿಟ್ಟು ಉಳಿದ 45 ಹೆಕ್ಟೇರ್ ವಿಸ್ತೀರ್ಣದ ಜಮೀನು ಅರಣ್ಯ ಎಂದು ಘೋಷಿಸುವ ಬಗ್ಗೆ ಪ್ರಸ್ತಾವನೆ ಉನ್ನತ ಮಟ್ಟದಲ್ಲಿ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

766(528) ಶ್ರೀ ಕುಮಾರಸ್ವಾಮಿ ಎಂ.ಪಿ(ಮೂಡಿಗೆರೆ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕಾಫಿ ಉದ್ಯಮದ ಪ್ರದೇಶವಾದ ಮೂಡಿಗೆರೆಗೆ ಪ್ರತಿದಿನ 55,000 ದಿಂದ 60,000 ಯೂನಿಟ್ ವಿದ್ಯುತ್ ಅವಶ್ಯಕತ ಇದ್ದು ಈಗ ಕೇವಲ 31,000 ಯೂನಿಟ್ ವಿದ್ಯುಚ್ಛಕ್ತಿ ವಿತರಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದಿನಕ್ಕೆ ಕೇವಲ ಆರು ಗಂಟೆಗಳು ಮಾತ್ರ ವಿದ್ಯುಚ್ಛಕ್ತಿ ವಿತರಣೆಯಾಗುತ್ತಿದ್ದು ಇದರಿಂದ ರೈತರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಇ) ಹಾಗಿದ್ದರೆ, ಇದನ್ನು ಸರಿಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಪ್ರಸ್ತುತ ಲಭ್ಯತೆಗನುಗುಣವಾಗಿ ಮೂಡಿಗೆರೆ ವಿದ್ಯುತ್ ವಿತರಣಾ ಕೇಂದ್ರಕ್ಕೆ ಪ್ರತಿದಿನ 44,000 ಯೂನಿಟ್‌ಗಳ ವಿದ್ಯುತ್ ಬಳಕೆಯನ್ನು ನಿಗದಿಪಡಿಸಲಾಗಿದೆ.

ಆ) ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ದಿನಾಂಕ 5-1-2005 ರಿಂದ ಜಾರಿಗೆ ಬಂದ ವಿದ್ಯುತ್ ಸರಬರಾಜು ನೀತಿಯಂತೆ. ಗ್ರಾಮಾಂತರ ಪ್ರದೇಶಗಳಿಗೆ ದಿನವಹಿ 9 ಗಂಟೆಗಳ ಕಾಲ(ಹಗಲು ವೇಳೆ 5ಗಂಟೆಗಳ ಕಾಲ ಮತ್ತು ರಾತ್ರಿ ವೇಳೆ 4 ಗಂಟೆಗಳ 3 ಫೇಸ್ ಮತ್ತು 9 ಗಂಟೆಗಳ ಕಾಲ(ಸಂಜೆ ವೇಳೆ 4 ಗಂಟೆಗೆ ಮತ್ತು ರಾತ್ರಿ ವೇಳೆ 5 ಗಂಟೆ(ಒಂದು ಫೇಸ್ ವಿದ್ಯುತ್ತನ್ನು ಸರಬರಾಜು ಮಾಡಲಾಗುತ್ತಿದೆ.

ಇ) ವಿದ್ಯುತ್ ಲಭ್ಯತೆ ಮತ್ತು ಸ್ಥಳೀಯ ಪ್ರದೇಶಗಳಲ್ಲಿರುವ ಉಪ ಕೇಂದ್ರಗಳ ಸಾಮರ್ಥ್ಯ ಹಾಗೂ ವಿದ್ಯುತ್ ಮಾರ್ಗಗಳ ಸಾಮರ್ಥ್ಯದ ಮಿತಿಗೊಳಪಟ್ಟು ಪೂರೈಸಲಾಗುತ್ತಿದೆ.

ಶೇಕಡ 94 ಕ್ಕಿಂತ ಹೆಚ್ಚಿಗೆ ಕಂದಾಯ ವಸೂಲಿಯಾಗುತ್ತಿರುವ ಗ್ರಾಮಾಂತರ ಫೀಡರ್‌ಗಳಿಗೆ ಹೆಚ್ಚಿನ ಸಮಯ ವಿದ್ಯುತ್ತನ್ನು ಪೂರೈಸಲು ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೂಚಿಸಲಾಗಿದೆ.

767(1043) ಶ್ರೀ ಮಾಧುಸ್ವಾಮಿ ಜೆ.ಸಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಕಂದಾಯ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿ ಸರ್ಕಾರದಿಂದ ಮಂಜೂರಾಗಿರುವ ಜಮೀನು ಕಾಲಕಾಲಕ್ಕೆ ದುರಸ್ತಿ ಆಗದೆ ರೈತರಿಗೆ ಸರ್ವೆ ನಕಾಶ ನಿಗದಿಯಾಗದೆ ಇರುವುದು (ಅಕಾರ ಬಂದ್ ದುರಸ್ತಿ) ಸರ್ಕಾರಕ್ಕೆ ತಿಳಿದಿದೆಯೇ;

ಆ) ಇದರಿಂದಾಗಿ ಸಿವಿಲ್ ವ್ಯಾಜ್ಯಗಳು ಅತಿಯಾಗಿ ದಿನನಿತ್ಯ ಗ್ರಾಮೀಣ ಭಾಗದ ಜನ ಕೋರ್ಟುಗಳಿಗೆ ಅಲೆಯುತ್ತಿರುವುದು ಗೊತ್ತಿದೆಯೇ;

ಇ) ಇದನ್ನು ನಿವಾರಿಸಿ ರೈತರಿಗೆ ಹದ್‌ಬಸ್ತು ಕಲ್ಲು ಹಾಕಿ ಪಕ್ಕಾ ಪೋಡು ಮಾಡಿಸಲು ಕ್ರಮ ಜರುಗಿಸಲಾಗುವುದೆ?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ಹೌದು

ಆ) ಗೊತ್ತಿದೆ

ಇ) ಬಾಕಿ ಇರುವ ವಿವಿಧ ಪೋಡಿ ಪ್ರಕರಣಗಳ ವಿಲೇವಾರಿಗಾಗಿ 2004ರ ಸೆಪ್ಟೆಂಬರ್ ತಿಂಗಳಿಂದ ವಿಶೇಷ ಪೋಡಿ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ. ಇಲಾಖೆಯಲ್ಲಿ ಭೂ ಮಾಪಕರ ಕೊರತೆಯಿದ್ದುದರಿಂದ ರೈತರಿಗೆ ಪೋಡಿ ಹಾಗೂ ಅಳತೆ ಕೆಲಸಕ್ಕೆ ತೊಂದರೆಯಾಗುವುದನ್ನು ತಡೆಯಲು ಪರವಾನಗಿ ಭೂಮಾಪಕರ ಸೇವೆಯನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸರ್ಕಾರದಿಂದ ಮಂಜೂರಾಗಿರುವ ಜಮೀನುಗಳು ಬಾಕಿ ಇರುವ ಪೋಡಿ ಕಡತಗಳ ಪಕ್ಕಾ ಪೋಡಿ ಮೂಲಕ ಹದ್ದುಬಸ್ತು, ಅಳತೆ ಹಾಗೂ ಅಕಾರಬಂದ್ ದುರಸ್ತಿಪಡಿಸುವ ಪ್ರಕರಣಗಳನ್ನು ಇತ್ಯರ್ಥ ಪಡಿಸುವಲ್ಲಿ ಗಣನೀಯ ಪ್ರಮಾಣದಲ್ಲಿ ಪ್ರಗತಿ ಸಾಧಿಸಲಾಗಿದೆ.

768(1045) ಶ್ರೀ ಮಾಧುಸ್ವಾಮಿ ಜೆ.ಸಿ.(ಚಿಕ್ಕನಾಯಕನಹಳ್ಳಿ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) 1994–95 ರಿಂದ ಚಿಕ್ಕನಾಯ್ಕನಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚುವರಿ ವಿತರಣಾ ಟಿಸಿ ಗಳನ್ನು ಗುರ್ತಿಸಿರುವ ಹಾಗೂ ಕಾರ್ಯಾದೇಶ ಮಾಡಿರುವ ಸಂಖ್ಯೆ ಎಷ್ಟು (ವರ್ಷವಾರು ಮಾಹಿತಿ ನೀಡುವುದು);

ಆ) ಅವುಗಳಲ್ಲಿ ಟಿ.ಸಿ. ಅಳವಡಿಸಿರುವ (ಟ್ರಾನ್ಸ್ ಫಾರ್ಮರ್)ಕೇಂದ್ರಗಳೆಷ್ಟು ;

ಇ) ಉಳಿದ ಕೇಂದ್ರಗಳೆಷ್ಟು ;

ಈ) ಇಷ್ಟು ಉಳಿಕೆಯಾಗಲು ಕಾರಣವೇನು ;

ಉ) ಇದರಿಂದ ಟಿ.ಸಿ.ಗಳು ವಿಫಲವಾಗುತ್ತಿರುವ ಸಂಖ್ಯೆ ಎಷ್ಟು ;

ಊ) ಅವುಗಳನ್ನು ಬದಲಾಯಿಸಲು ಆಗುತ್ತಿರುವ ಕಾಲವೇನು ;

ಋ) ಈ ಸಮಸ್ಯೆಯನ್ನು ಪರಿಹರಿಸಲು ಇಲಾಖೆಯ ಯೋಜನೆ ಏನು ?

ಶ್ರೀ ಹೆಚ್.ಡಿ.ರೇವಣ್ಣ(ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) 1994–95 ರಿಂದ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಗುರುತಿಸಿರುವ ಹೆಚ್ಚುವರಿ ವಿತರಣಾ ಟಿ.ಸಿ.ಗಳು ಮತ್ತು ಅವುಗಳಿಗೆ ನೀಡಿರುವ ಕಾರ್ಯಾದೇಶಗಳ ಸಂಖ್ಯೆ 612. ಇವುಗಳ ವರ್ಷವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿಸಿದೆ.

ಆ) ಟಿ.ಸಿ.ಅಳವಡಿಸಿರುವ ಕೇಂದ್ರಗಳ ಸಂಖ್ಯೆ 499.

ಇ) ಟಿ.ಸಿ. ಅಳವಡಿಸಬೇಕಾಗಿರುವ ಕೇಂದ್ರಗಳ ಸಂಖ್ಯೆ 113.

ಈ) ಪ್ರತಿ ವರ್ಷ ಪ್ರತಿ ತಾಲ್ಲೂಕಿಗೂ ನೀರಾವರಿ ಪಂಪುಸೆಟ್ಟುಗಳನ್ನು ವಿದ್ಯುದೀಕರಿಸಲು ಲಭ್ಯತೆ ಇರುವ ಬಜೆಟ್‌ನ ಆಧಾರದ ಮೇಲೆ ಗುರಿಯನ್ನು ನಿಗದಿಪಡಿಸಲಾಗುವುದು. ಆದರೆ ಹಣಕಾಸಿನ ಕೊರತೆಯಿಂದಾಗಿ ಮತ್ತು ನಿರ್ದಿಷ್ಟ ಸಾಮಗ್ರಿಗಳ ಸರಬರಾಜಿನಲ್ಲಿಯ ಏರುಪೇರು, ಉತ್ತಮ ಗುತ್ತಿಗೆದಾರರ ಅಭಾವ ಇತ್ಯಾದಿ ಕಾರಣಗಳಿಂದ ಗುರುತಿಸಿದ ಕಾಮಗಾರಿಗಳನ್ನು ಪೂರ್ಣ ಪ್ರಮಾಣದಲ್ಲಿ ಕೈಗೆತ್ತಿಕೊಳ್ಳಲಾಗದೆ ಕೆಲವು ಕಾಮಗಾರಿಗಳು ಬಾಕಿ ಉಳಿದಿವೆ. ಸದರಿ ತಾಲ್ಲೂಕಿನಲ್ಲಿ ಉಳಿದ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.